

ಭವಿಷ್ಯತ್ ಕಾಲದ ದರ್ಶನವಾದರೆ ನಾನು ಈ ಜಗತ್ತನ್ನೇ ಮರೆತುಬಿಡುವೆನೇನೋ. ಈ ಕೆಲಸ ಪರಿಪೂರ್ಣಗೊಳಿಸಲು ಇನ್ನೂ ಎಷ್ಟು ದಿನಗಳಾಗಬಹುದು?' 'ಅಬ್ಬಬ್ಬಾ ಅಂದರೆ ಒಂದು ವಾರವಾಗಬಹುದೇನೋ...'' ಅಂದಾಜಿನಿಂದ ನುಡಿದ.

'ಆಲ್‌ರೈಟ್, ನಿನಗೆ ಒಂದು ಕಂಪನಿಯ ಪ್ರಾಜೆಕ್ಟ್ ಕಾದಿದೆ. ಈ ಚಳಿಗಾಲದಲ್ಲಿ ಕೊಂಚ ಸೂರ್ಯ ಕಿರಣ ಸಾಕು ಸೂರ್ಯಸ್ನಾನ ಮಾಡಲು ಅಂತಾ ಕಾದಿರುವ ಮಂದಿಗೆ ಲೊಕೇಷನ್ ಬೆಸ್ಟ್ ಸ್ಥಳಗಳ ಅವಶ್ಯಕತೆ ಇದೆ. ಈ ಕಂಪನಿಗೆ ಅಲ್ಲಿ ಸನ್‌ಡೆಕ್‌ಗಳನ್ನು ಸ್ಥಾಪಿಸುವ ಇರಾದೆ ಇದೆ. ಅದಕ್ಕೆ ಮ್ಯಾಪಿಂಗ್ ಮಾಡಿಕೊಡಬೇಕಿದೆ.'' ಆಶಿಶ್‌ನಿಗೆ ಗಿರಾಕಿಯನ್ನು ಕಳೆದುಕೊಳ್ಳಬಾರದೆಂಬ ಚಿಂತೆ.

'ವೇಟಿಂಗ್ ಲಿಸ್ಟ್‌ನಲ್ಲಿ ಹಾಕಿ ಬಾಸ್. ಸರದಿ ಪ್ರಕಾರ ಕೈಗೆತ್ತಿಕೊಳ್ಳಲಾಗುತ್ತೆ ಎಂದು ತಿಳಿಸಿದರಾಯಿತು.'

'ನಾನು ಅದನ್ನೇ ಹೇಳೋದು, ಆದರೆ ಈ ಪ್ರಯೋಗ ಬೇಗ ಮುಗಿಸು' ಎಂದು ಅವನ ಬೆನ್ನುತಟ್ಟಿ ಆಶಿಶ್ ಹೊರಹೋದರು. ರಜತ್‌ನಿಗೆ ಏಕಾಂತದ ಅಗತ್ಯವಿತ್ತು. ಅದಕ್ಕೆ ಪೂರಕವಾಗಿ ಈ ಕೋಣೆಯ ಹೋಲೋಗ್ರಾಫಿಕ್ ಪ್ರಕಾಶಬಿಂಬದ ಮ್ಯಾಪಿಂಗ್‌ಗೆ ಅಗತ್ಯ ವಿಶಾಲ ಸ್ಥಳವೂ ಇತ್ತು. ಭೂತಕಾಲಕ್ಕೆ ಪ್ರವೇಶಿಕೆ ಒದಗಿಸಿದಂತೆ ವರ್ತಮಾನದಿಂದ ಭವಿಷ್ಯತ್ ಮ್ಯಾಪಿಂಗ್‌ಗೂ ಪ್ರವೇಶಿಕೆಯ ಅವಶ್ಯಕತೆ ಇತ್ತು. ಅದನ್ನು ಮೊದಲು ಸೃಜಿಸಿ ಸದೃಢಗೊಳಿಸಿ ಅನಂತರ ಕೆಲವೊಂದು ಸಂಭವನೀಯತೆಗಳನ್ನು ಪಟ್ಟಿ ಮಾಡಿಕೊಳ್ಳುವುದಿತ್ತು. ಜೀವನದ ಪ್ರತಿಯೊಂದು ಪ್ರಮುಖ ಘಟ್ಟಕ್ಕೂ ಇದು ಅನ್ವಯವಾಗಲಿತ್ತು. ಜೊತೆಗೆ ಸುಖದುಃಖವೆಂಬ ವಿಪರೀತಗಳ ನಡುವಿನ ಸಂಭವನೀಯ ಪರಿಸ್ಥಿತಿಗಳನ್ನು, ವ್ಯಕ್ತಿಗತ ಸ್ವಭಾವ ಆಸೆ, ಆಕಾಂಕ್ಷೆ, ಹೊರಗಿನ ಪರಿಸ್ಥಿತಿಯ ಪ್ರಭಾವ... ಎಲ್ಲವನ್ನೂ ಗಣನೆಗೆ ತೆಗೆದುಕೊಳ್ಳಬೇಕಿತ್ತು. ಭವಿಷ್ಯತ್ ಕಾಲವು ಅಷ್ಟು ಸುಲಭವಾಗಿ ತೆರೆದುಕೊಳ್ಳದೆ ಕಪ್ಪೆಚಿಪ್ಪಿನೊಳಗೆ ಅಡಗಿಕೊಂಡು ಆಶ್ಚರ್ಯಗಳನ್ನು ಎರಚಲು ಕಾಯುತ್ತಿರುತ್ತದೆ ಎಂಬುದನ್ನು ಬಲ್ಲ. ಸಂಪ್ರದಾಯದಲ್ಲಿ ಆಸಕ್ತಿ ಇದ್ದ ತಂದೆ ಧಾರೇಶ್ವರ್ ಭವಿಷ್ಯದ ಆಶೋತ್ತರಗಳನ್ನು ರಜತ್ ಕೇಳಿದಾಗ ಬಿಚ್ಚಿಡಲು ಹಿಂಜರಿದಿದ್ದರು.

"ನಾಳೆ ಏನಾಗುತ್ತೆ ಎಂದು ಹೇಳಲಿಕಾಗುತ್ತದೆಯೇ ರಜತ್? ಆ ಭಗವಂತ ನಮ್ಮ ಹಣೆಯಲ್ಲಿ ಏನು ಬರೆದಿದ್ದಾನೋ ಬಲ್ಲದ್ಯಾರೋ, ವಿಧಿ ಲಿಖಿತವನ್ನು ತಪ್ಪಿಸಲಿಕ್ಕಾಗುತ್ತದೆಯೇ? ಅಂದಾಜು ಮಾಡಲಿಕ್ಕಾಗುತ್ತೇನು?'' ಎಂದಾಗ ರಜತ್‌ನಿಗೆ ಮುಖಕ್ಕೆ ತಣ್ಣೀರೆರಚಿದಂತಾಗಿತ್ತು. ಆದರೂ ಪಟ್ಟುಬಿಡದೆ ಅವರ ದೈನಂದಿನ ದಿನಚರಿ, ಚಟುವಟಿಕೆ ಸ್ಥಳಗಳ ವಿವರ ಪಡೆದ. ಅವರ ದೇಹಸ್ಥಿತಿ, ಆರೋಗ್ಯ, ವಯಸ್ಸನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅಂದಾಜಿನ ಮೇಲೆ ಇಷ್ಟು ವರ್ಷ ಬದುಕಿರುವರೆಂದೂ ಅದರ ಮೇಲೆ ಅವರ ತನ್ನ ಜೀವನದಲ್ಲಿ ನಿರ್ವಹಿಸುವ ಪಾತ್ರಕ್ಕೆ ಬಣ್ಣ ತುಂಬಿದ. ತಂದೆ ಗುಣಕ್ಕೆ ವ್ಯತಿರಿಕ್ತವಾಗಿರಲಿಲ್ಲ ಸುಗುಣ ಅವರ ಸ್ವಭಾವ. ವಯಸ್ಸಾದರೂ ರಜತ್‌ನನ್ನು 'ಮಗು' ಎಂದೇ ಕರೆದು ಅಭ್ಯಾಸ ಅವರಿಗೆ. 'ಮಗು, ಕರ್ಮ ಯಾರನ್ನೂ ಬಿಡೋಲ್ಲ. ಅವರಿಗೆ ಇರುವ ಪಾಪ, ಪುಣ್ಯಗಳ ಮೇಲೆ ಭವಿಷ್ಯ ನಿಂತಿರುತ್ತೆ. ಹುಚ್ಚು ಹುಡುಗನಂತೆ ಏನೋ ಜನರ ಮನರಂಜನೆಗೆ ನಮ್ಮ ಜೀವನದ ಬದುಕನ್ನೇ ದಾಳವನ್ನಾಗಿ ಪ್ರಯೋಗಿಸುತ್ತಿರುವೆಯಲ್ಲೋ,' ಮೃದುವಾಗಿ ಕುಟುಕಿದರು.

ಅವರಿಗೆ ಸಾಂಪ್ರದಾಯಿಕವಾಗಿ ಸರಳವಾಗಿ ವಿವಾಹ ಮಹೋತ್ಸವ ಜರುಗಿಸಬೇಕೆಂಬಾಸೆ. ಹೆಚ್ಚು ಆಡಂಬರವಾದರೂ ಅದರ ಬಹುಪಾಲು ಕೆಲಸ ತಾವೇ ನಿರ್ವಹಿಸಬೇಕಾದ್ದರಿಂದ ಆದಷ್ಟು ಸರಳವಾಗಿ ಅಚ್ಚುಕಟ್ಟಾಗಿ ಮಾಡಿ ಮುಗಿಸಿಬಿಡಬೇಕೆಂಬ ಆಸೆ. ಆದರೆ ಮಗನ ಈ ಹೊಸ ಆಲೋಚನೆ ಅವರಿಗೆ ಅರ್ಥವಾಗಿರಲಿಲ್ಲ. ಅವರಿಗೆ ವಿವರಿಸಿ ಒಪ್ಪಿಸುವಷ್ಟರಲ್ಲಿ ರಜತ್‌ನ ಶಕ್ತಿಯನ್ನೆಲ್ಲಾ ವ್ಯಯಿಸಬೇಕಿತ್ತು. ಕೊನೆಗೆ ಅವನ ಸಹಾಯಕ್ಕೆ ತಂದೇನೇ ಬರಬೇಕಿತ್ತು.

"ಬಿಡೇ ಸುಗುಣ, ರಜತ್‌ಗೆ ಏನೋ ಆಸೆ. ಮದುವೆ ಮನೆಗೆ ಜನಾ ಎಲ್ಲಾ ಇರ್ತಾರೆ. ಆರ್ಕೆಸ್ಟ್ರಾ ಕೇಳೋ ಬದಲು ಈ ವಿನೂತನ ಅನುಭವ ಸಿಗಲಿ ಅಂತಾ. ಅವನು ನಮ್ಮ ಜೀವನದ ಕೊನೇವರೆಗೂ ತೋರಿಸೋಲ್ವಂತೆ. ಅಂದಾಜು ಇಷ್ಟು ವರ್ಷ ಬದುಕಿರ್ತಿವಿ ಎಂಬ ಊಹೆಯ ಮೇರೆಗೆ ಭವಿಷ್ಯತ್ ಕಾಲದ ನೋಟ ದೊರಕುವಂತೆ ಮಾಡ್ತಾನಂತೆ, ನೀನು ಜೀವನದಲ್ಲಿ ಏನೆಲ್ಲಾ ಮಾಡ್ಬೇಕಂತಿದ್ದೆಯೋ ಅದನ್ನೆಲ್ಲಾ ಹೇಳ್ಬಿಡು'' ಎಂದಾಗ ಸುಗುಣ ಗೊಣಗುತ್ತಲೇ ತಮ್ಮ ಆಸೆಯನ್ನೆಲ್ಲಾ ಒಂದೊಂದಾಗಿ ರಜತ್‌ನ ಮುಂದೆ ಬಿಚ್ಚಿಡತೊಡಗಿದರು. ಮುಂದೆ ಭವಿತಾಳನ್ನು ಇದೇ ರೀತಿ ಪ್ರಶ್ನೆಗಳನ್ನು ಕೇಳತೊಡಗಿದಾಗ ಅವಳು ಅವನ ತಂದೆ ತಾಯಿಯಂತೆ ಮೀನಾ ಮೇಷ ಎಣಿಸದೆ ಅರಳುಹುರಿದಂತೆ ಮಾತನಾಡುತ್ತಾ ತನ್ನ ಆಶೋತ್ತರಗಳನ್ನು ಒಂದೊಂದಾಗಿ ಪೋಣಿಸಿ ನುಡಿದರು. ಇದಲ್ಲದರ ನಡುವೆ ತನ್ನ ಜೀವನ ಗತಿಯನ್ನೂ ಗಣನೆಗೆ ತೆಗೆದುಕೊಳ್ಳಬೇಕಿತ್ತು. ಈ ಮಧ್ಯೆ ಧಾರೇಶ್ವರ್ ಅವರು ಒಮ್ಮೆ ಗೊಣಗುತ್ತಾ ಹೇಳಿದ ಮಾತುಗಳು ಕಿವಿಯಲ್ಲಿ ಗುಯ್‌ಗುಡತೊಡಗಿತು.

'ಏನು ಹುಚ್ಚು ಹುಡುಗನೋ, ಈ ಹಿಂದೆ ಸಪ್ತ ಋಷಿಗಳಲ್ಲಿ ಒಬ್ಬರಾದ ಅಗಸ್ತ್ಯ ಮುನಿಗಳು ತಾಳೆಗರಿಗಳ ಮೇಲೆ ವ್ಯಕ್ತಿಗಳ ಭೂತ, ವರ್ತಮಾನ ಹಾಗೂ ಭವಿಷ್ಯದ ಬಗ್ಗೆ ಮುಂಚಿತವಾಗಿಯೇ ಬರೆದಿಟ್ಟಿದರು. ನೀನ್ಯಾವ ಜೀವನ ಚರಿತ್ರೆಯನ್ನು ನಕ್ಷೆಯಲ್ಲಿ ಬಿಡಿಸ್ತಿಯೋ ಕಾಣೆ...' ಹಾಗಾದರೆ ಅಗಸ್ತ್ಯ ಮುನಿಗಳು ಯಾವ ಆಯಾಮದಲ್ಲಿ ಅದನ್ನು ರಚಿಸಿದರೋ....? ನಂತರ ರಜತ್ ಇದ್ಯಾವುದನ್ನು ಹೆಚ್ಚು ತಲೆಗೆ ಹಚ್ಚಿಕೊಳ್ಳದೆ ತನ್ನ ಮುಂದಿನ ಉಪಕ್ರಮದ ಕಡೆ ಗಮನ ಹರಿಸತೊಡಗಿದ. ವರ್ತಮಾನದಿಂದ ಭವಿಷ್ಯತ್ ಕಡೆ ಸಾಗಲು ಮತ್ತೊಂದು ಪ್ರವೇಶಿಕೆಯ ಅಗತ್ಯವಿತ್ತು. ಅದನ್ನು ಸೂಕ್ತ ಜಾಗದಲ್ಲಿ ಸೃಷ್ಟಿಸಿ ಭವಿಷ್ಯತ್ತಿನ ಪ್ರಮುಖ ಘಟ್ಟಗಳನ್ನು ಗುರುತಿಸಿದ. ಅದಕ್ಕೆ ಸಂಭವನೀಯ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಒಂದು ಅಂದಾಜಿನ ಮೇಲೆ ನಿಗದಿಪಡಿಸಿದ ಜಾಗಗಳಲ್ಲಿನ ಜೀವನ ಚಿತ್ರಗಳನ್ನು ಬಿಡಿಸಿದ. ತಾನು ನಿವೃತ್ತಿಹೊಂದುವ ವಯಸ್ಸಿನವರೆಗೆ ಸಾಕೆಂದು ಅಲ್ಲಿಗೆ ತಿಲಾಂಜಲಿ ಇಟ್ಟ. ಭವಿತಾಳಂತೆ ತನಗೂ ಉನ್ನತ ಧ್ಯೇಯೋದ್ದೇಶಗಳಿದ್ದವು. ಅವುಗಳ ಸಮ್ಮಿಲನದಲ್ಲಿ ಒಂದು ಬದುಕಿನ ಚಿತ್ರವನ್ನು ಖಂಡಿತ ಬಿಡಿಸಬಹುದಾಗಿತ್ತು. ತಾನು ಕರ್ತವ್ಯದಲ್ಲಿ ಉನ್ನತ ಸ್ಥಾನಕ್ಕೆ ಹೋಗಲು ಇದ್ದ ಅಡೆತಡೆಗಳ ನಿವಾರಣೆ ಜೊತೆಗೆ ಒಂದು ಗುರಿಯೊಂದಿಗೆ ಅದನ್ನು ಮುಂದುವರಿಯುವ ಛಲ ಇತ್ತು. ವಿವಾಹದ ಬಳಿಕ ಭವಿತಾಳೂ ತನ್ನ ವೃತ್ತಿಯನ್ನು ಮುಂದುವರಿಸಲಿದ್ದಳು. ವಿವಾಹವಾದ ಬಳಿಕ ಒಂದೆರಡು ವರ್ಷ ಮಕ್ಕಳಾಗುವುದು ಬೇಡವೆಂದು ಹೇಳಿದ್ದಳಲ್ಲವೇ... ಆ ಸಮಯ ತಾವಿಬ್ಬರೂ ವೃತ್ತಿ ಬದುಕು ಹಾಗೂ ಹೊರ ಪ್ರಪಂಚವನ್ನು ಮತ್ತಷ್ಟು ಅನ್ವೇಷಿಸುವ ಉತ್ಸಾಹದಿಂದ ಪ್ರವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಂಭವನೀಯತೆ ಹೆಚ್ಚಿತ್ತು. ಅವಳು ಅವಳ ತಂದೆ ತಾಯಿಗೆ ಒಬ್ಬಳೇ ಮಗಳು. ಹೀಗಾಗಿ ವಯಸ್ಸಾದ ಅಪ್ಪ ಅಮ್ಮನನ್ನು ನೋಡಿಕೊಳ್ಳುವ ಜವಾಬ್ದಾರಿ ಹೊರಬೇಕಿದೆ. ಎಂದಾದರೊಮ್ಮೆ ಅವರಿಬ್ಬರೂ ತನ್ನ ಮನೆಗೆ ಬಂದು ವಾಸ ಮಾಡಲೂಬಹುದು.

ರಜತ್‌ನ ವಿಚಾರ ಲಹರಿ ಭೂಪಟದಲ್ಲಿ ಮ್ಯಾಪಿಂಗ್ ಮಾಡುವುದರೊಂದಿಗೆ ಕಲೆತು ಕಾಲದ ಸೆಳೆತಕ್ಕೆ ಒಳಗಾಗಿ ತನ್ನದೇ ಲೋಕದಲ್ಲಿ ವಿಹರಿಸಿದಾಗ ಭವಿತಾಳ ಆಗಮನವಾಗಿತ್ತು.

ರಜತ್‌ನ ಹೋಲೊಗ್ರಾಫಿಕ್ ಪ್ರಕಾಶಬಿಂಬದ ಚಿತ್ರಗಳಲ್ಲಿ ಸಂಭವನೀಯ ದೃಶ್ಯಗಳನ್ನು ಬಿಡಿಸುವುದನ್ನು ವೀಕ್ಷಿಸುತ್ತಾ ಭವಿತಾಳಲ್ಲಿ ಒಂದು ಸಂಶಯ ಸುಳಿದಾಡಿತು. ಅದು ನಿಜವೇ ಆದಲ್ಲಿ ರಜತ್‌ನನ್ನು ಕೂಡಲೇ ಅವನ ಕೆಲಸದಿಂದ ಎಚ್ಚರಿಸಬೇಕಿತ್ತು. ಇಲ್ಲದಿದ್ದರೆ ಕಾಲವೆಂಬ ನಾಲ್ಕನೇ ಆಯಾಮದಲ್ಲಿ ಸಿಲುಕಿಕೊಳ್ಳುವ ಸಾಧ್ಯತೆಯಿತ್ತು. "ರಜತ್...ರಜತ್...'' ಎಂದು ಅವನನ್ನು ಎಬ್ಬಿಸಲು ಪ್ರಯತ್ನಿಸಿದಾಗ ಅವನು ನಿದ್ರೆಗೆ ಜಾರಿದಂತೆ ಯಾವುದೋ ಗುಂಗಿಗೆ ಇಳಿದಂತಿತ್ತು. ಆದರೆ ಅವನು ಕಂಪ್ಯೂಜೆಕ್ಟರ್‌ನಲ್ಲಿ ಅಳವಡಿಸಿದ ಟೈಮರ್ ಉಳಿಯಿತು.

'ಈಗ ಭವಿಷ್ಯತ್ ಕಾಲದ ಚಿತ್ರಣ ಮುಗಿಸಲು ಅರ್ಧಗಂಟೆ ಬಾಕಿ ಇದೆ. ಆ ಕಾಲಕ್ಕೆ ಹೋಗಬೇಕಿದ್ದರೆ ಅದಕ್ಕೆಂದೇ ಮೀಸಲಾದ ಪ್ರವೇಶಿಕೆ ಮೂಲಕ ಸಾಧ್ಯವಷ್ಟೇ.' ಭವಿತಾ ದಿಗ್ಭ್ರಾಂತಳಾಗಿ ಹೋಲೊಗ್ರಾಫಿಕ್ ಮ್ಯಾಪಿಂಗ್‌ನೆಡೆ ನೋಡುವಾಗ ಒಂದೆಡೆ ಬಾಗಿಲಿನ ಚಿತ್ರವೊಂದು ಕೆಂಪು ಬಣ್ಣದಲ್ಲಿ ಬೆಳಗಿತು. ಅದುವೇ ಭವಿಷ್ಯತ್ ಕಾಲದ ಪ್ರವೇಶಿಕೆ ಇರಬೇಕೆಂದು ಊಹಿಸಿ ವೀಕ್ಷಣಾ ಗಾಗಲ್ಸ್ ತೊಟ್ಟು ಅದನ್ನು ಪ್ರವೇಶಿಸಲು ಸಿದ್ಧಳಾದಳು. ಅವಳಲ್ಲಿದ್ದ ಗುರಿ ಒಂದೇ. ರಜತ್‌ನನ್ನು ಹೇಗಾದರೂ ವರ್ತಮಾನಕ್ಕೆ ಕರೆತರಬೇಕಿತ್ತು.

ಪ್ರತಿಕ್ರಿಯಿಸಿ: feedback@sudha.co.in



